# ದೀಪಾವಳಿಗೆ ವಿಕಲಚೇತನರ ಕಾರ್ಯಕ್ರಮ

ಬೆಂಗಳೂರು, ಅ 9– ದೀಪಾವಳಿ ದೀಪಗಳ ಹಬ್ಬ. ಕತ್ತಲನ್ನು ಓಡಿಸಿ ಸರ್ವರಲ್ಲಿಯೂ ಸಕಾರಾತ್ಮಕ ಮನೋಭಾವ, ಸಂತಸವನ್ನು ತರುವ ಹಬ್ಬ. ಇಂಥದೊಂದು ನಂಬಿಕೆಯೊಂದಿಗೆ ಮಂತ್ರಿ ಸ್ಕ್ವೇರ್ ಈಗ ದೀಪಾವಳಿಯಲ್ಲಿ ಸಮರ್ಥನಂ ಟ್ರಸ್ಟ್‌ನ ಸುಮಾರು 25 ಉತ್ಸಾಹಿ ಅಂಗವಿಕಲ ಮಕ್ಕಳಿಂದ ಕಾರ್ಯಕ್ರಮ ಆಯೋಜಿಸುವ ಮೂಲಕ ಹಬ್ಬವನ್ನು ಆಚರಿಸುತ್ತಿದೆ.

ಮಾಲ್‌ನ ಈ ಕಾರ್ಯಕ್ರಮದ ಉದ್ದೇಶವೆಂದರೆ ಈ ವಿಶೇಷ ಮಕ್ಕಳಿಗೆ ಪ್ರತಿಭಾಭಿವ್ಯಕ್ತಿಗೆ ವೇದಿಕೆ ಒದಗಿಸುವುದಷ್ಟೇ ಅಲ್ಲ; ಈ ದೀಪಾವಳಿಯ ಹಬ್ಬದ ಆಚರಣೆಯಲ್ಲಿ ಸ್ವತಃ ತಾವು ಭಾಗಿಯಾಗುವ ಅನುಭವವನ್ನು ಅವರಿಗೆ ನೀಡುವುದೇ ಆಗಿದೆ. ಸಮರ್ಥನಂ ಟ್ರಸ್ಟ್ ಒಂದು ಲಾಭಯೇತರ ಸಂಸ್ಥೆಯಾಗಿದ್ದು, ವಿಶೇಷ ಅಂಗವಿಕಲ ಮಕ್ಕಳನ್ನು ಸಾಮಾಜಿಕ ಮತ್ತು ಆರ್ಥಿಕವಾಗಿ ಮುನ್ನಡೆಸಲು ಕಾರ್ಯನಿರ್ವಹಿಸುತ್ತಿದೆ. ಈ ವಿಶೇಷ ಮಕ್ಕಳು ಮಾಲ್‌ನ ಪ್ರೇಕ್ಷಕರಿಗಾಗಿ ವಿಶೇಷವಾಗಿ ಸಂಯೋಜಿಸಿದ ನೃತ್ಯದ ಜೊತೆಗೆ ಎರಡು ಗೀತೆಗಳನ್ನು ಪ್ರಸ್ತುತ ಪಡಿಸಲಿದ್ದಾರೆ. ಈ ದೀಪಾವಳಿ ಹಬ್ಬ ಪ್ರೀತಿ ಮತ್ತು ಸಂಭ್ರಮವನ್ನು ಒದಗಿಸಲಿದೆ. ಈ ವರ್ಷದ ದೀಪಾವಳಿಯ ಹಬ್ಬದ ಸಂಭ್ರಮವನ್ನು ಅಲಂಕರಣದ ಜೊತೆಗೆ ಮಾಲ್‌ನಲ್ಲಿ ಕಾರ್ಯಕ್ರಮ ನೀಡಲು ವಿಶೇಷ ಮಕ್ಕಳನ್ನು ಆಹ್ವಾನಿಸಲಾಗುತ್ತಿದೆ ಎಂದು ಮಂತ್ರಿ ಸ್ಕ್ವೇರ್‌ನ ಮಾಲ್‌ನ ಮುಖ್ಯಸ್ಥ ನಿತಿನ್ ಬಿರ್ ಅವರು ತಿಳಿಸಿದ್ದಾರೆ.